# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 779
2. ಮಾನ್ಯ ಸದಸ್ಯರ ಹೆಸರು : ಶ್ರೀ ರವಿಕುಮಾರ್ ಎನ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ದಿನಾಂಕ : 12.12.2023
4. ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಯುವ ರೈತರಿಗೆ ನೀಡಬೇಕಾದ ಬಾಕಿ ಮೊತ್ತ ಎಷ್ಟು ; ಕಳೆದ 3 ವರ್ಷಗಳ ಕಾರ್ಖಾನೆವಾರು ವಿವರ ನೀಡುವುದು:</td><td>2020-21, 2021-22 ಮತ್ತು 2022-23ನೇ ಹಂಗಾಮುಗಳಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬು ನುರಿಸಿದ ಪ್ರಮಾಣ, ಪಾವತಿಸಬೇಕಾದ ಕಬ್ಬು ಬಿಲ್ಲು ಮತ್ತು ಪಾವತಿಸಿದ ಬಿಲ್ಲಿನ ವಿವರಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ಒದಗಿಸಿದೆ.
<table>
<tr><th>ವರ್ಷ</th><th>ಕಬ್ಬು ನುರಿಸಿದ ಪ್ರಮಾಣ <u>ಲಕ್ಷ ಟನ್‌ಗಳಲ್ಲಿ</u></th><th>ರೈತರಿಗೆ ಪಾವತಿಸಬೇಕಾದ ಕಬ್ಬು ಬಿಲ್ಲಿನ ಮೊತ್ತ <u>ರೂ.ಕೋಟಿಗಳಲ್ಲಿ</u></th><th>ಕಾರ್ಖಾನೆಗಳು ಪಾವತಿಸಿದ ಕಬ್ಬು ಬಿಲ್ಲು ಮೊತ್ತ <u>ರೂ.ಕೋಟಿಗಳಲ್ಲಿ</u></th><th>ಬಾಕಿ</th></tr>
<tr><td>2020-21</td><td>440.84</td><td>13402.22</td><td>13533.08</td><td>0</td></tr>
<tr><td>2021-22</td><td>622.26</td><td>19634.84</td><td>19922.39</td><td>0</td></tr>
<tr><td>2022-23</td><td>603.55</td><td>19747.85</td><td>20138.93</td><td>0</td></tr>
</table>
ಷರಾ:- ಕೆಲವೊಂದು ಸಕ್ಕರೆ ಕಾರ್ಖಾನೆಗಳಲ್ಲಿ ನ್ಯಾಯ ಮತ್ತು ಲಾಭದಾಯಕ ಬೆಲೆಯ ದರಕ್ಕೂ ಮೇಲ್ಪಟ್ಟು ಕಬ್ಬು ಬಿಲ್ಲನ್ನು ಪಾವತಿಸಲಾಗಿರುತ್ತದೆ. ಇದರಿಂದಾಗಿ, ರಾಜ್ಯದ ಸಕ್ಕರೆ ಕಾರ್ಖಾನೆಗಳು 2020-21, 2021-22 ಮತ್ತು 2022-23ನೇ ಹಂಗಾಮುಗಳಲ್ಲಿ ರೈತರಿಗೆ ಪಾವತಿಸಬೇಕಾದ ನೈಜ ಕಬ್ಬು ಬಿಲ್ಲಿಗಿಂತ ಅಧಿಕ ಮೊತ್ತವನ್ನು ಪಾವತಿಸಿರುವುದು ಕಂಡು ಬರುತ್ತದೆ ಹಾಗೂ 2020-21, 2021-22 ಮತ್ತು 2022-23ನೇ ಹಂಗಾಮುಗಳಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಯಾವುದೇ ಕಬ್ಬು ಬಿಲ್ಲು ಬಾಕಿ ಇರುವುದಿಲ್ಲ.</td></tr>
<tr><td>ಆ)</td><td>ಸಕ್ಕರೆ ಕಾರ್ಖಾನೆಗಳು ಒಂದು ಟನ್ ಕಬ್ಬಿಗೆ ನೀಡುವ ದರ ಎಷ್ಟು ; ಸರ್ಕಾರವು ರೈತರಿಗೆ ನೀಡುವ ದರ ಎಷ್ಟು? ಸರ್ಕಾರವು ಕಬ್ಬಿಗೆ ನಿಗದಿಪಡಿಸಿದ ಬೆಂಬಲ ಬೆಲೆ ಎಷ್ಟು:</td><td>2023-24ನೇ ಸಾಲಿನ ಸಕ್ಕರೆ ಹಂಗಾಮಿಗೆ ಕೇಂದ್ರ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು ಪತ್ರ ಸಂಖ್ಯೆ:3(1)/2022-SP-I, ದಿನಾಂಕ:06.07.2023ರಲ್ಲಿ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair And Remunerative Price) ನಿಗದಿಗೊಳಿಸಲಾಗಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತವೆ.<br><br>1.ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ - ರೂ.315.00 ಗಳನ್ನು ಪಾವತಿಸುವುದು.<br>2.ಶೇಕಡ 10.25ಕ್ಕೆ ಇಳುವರಿಗೆ ಮೇಲ್ಪಟ್ಟ ತದನಂತರದ ಪ್ರತಿ ಶೇಕಡ 0.1 ರಷ್ಟು ಇಳುವರಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ – ರೂ.3.07 ಗಳನ್ನು ಪಾವತಿಸುವುದು.<br>3.10.25% ಕ್ಕಿಂತ ಕಡಿಮೆ ಆದರೆ 9.5% ಕ್ಕಿಂತ ಮೇಲ್ಪಟ್ಟು ಇಳುವರಿಯನ್ನು ಹೊಂದಿರುವ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ, ಪ್ರತಿ 0.1 ಶೇಕಡಾ ಕಡಿಮೆಯಾದ ಇಳುವರಿ ನ್ಯಾಯ ಮತ್ತು ಲಾಭದಾಯಕ ಬೆಲೆಯಲ್ಲಿ ಪ್ರತಿ ಕ್ವಿಂಟಾಲ್‌ಗೆ ರೂ.3.07 ಗಳನ್ನು ಕಡಿಮೆ ಪಾವತಿ ಮಾಡುವುದು.<br>4.ಶೇಕಡ.9.5 ರಷ್ಟು ಅಥವಾ ಶೇಕಡ 9.5ಕ್ಕಿಂತ ಕಡಿಮೆ ಇಳುವರಿಯನ್ನು ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ರೂ.291.975 ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಪಾವತಿಸುವುದು.</td></tr>
</table>

| | | |
|---|---|---|
| | | ರಾಜ್ಯದ ಕಾರ್ಯನಿರತ ಸಕ್ಕರೆ ಕಾರ್ಖಾನೆಗಳು 2022-23ನೇ ಸಾಲಿನಲ್ಲಿ ಪಡೆದ ಸಕ್ಕರೆ ಇಳುವರಿಯನ್ನು ಆಧರಿಸಿ 2023-24ನೇ ಹಂಗಾಮಿಗೆ ಕಾರ್ಖಾನೆಗಳು ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆಯ ಕುರಿತು ದಿನಾಂಕ:16.09.2023 ರಂದು ಕರಡು ಆದೇಶವನ್ನು ಪ್ರಕಟಿಸಲಾಗಿದೆ.<br>ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ ತಿದ್ದುಪಡಿ) ವಿಧೇಯಕ 2014ರ ಖಂಡಿಕೆ 9 (1) ರನ್ವಯ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಕಬ್ಬಿನ ಬಿಲ್ಲು ಪಾವತಿಯನ್ನು ಎರಡು ಹಂತಗಳಲ್ಲಿ ಮಾಡತಕ್ಕದ್ದಾಗಿರುತ್ತದೆ. ಮೊದಲ ಹಂತದಲ್ಲಿ ಕಬ್ಬನ್ನು ಸರಬರಾಜು ಮಾಡಿದ ತಕ್ಷಣ ಕಾರ್ಖಾನೆಯ ಅದಿಭೋಗದಾರನು ಸಂಬಂಧಪಟ್ಟ ಕಾರ್ಖಾನೆಯ ಹಿಂದಿನ ವರ್ಷದ ಇಳುವರಿ ಆಧಾರದ ಮೇಲೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (ಎಫ್.ಆರ್.ಪಿ) ಪಾವತಿಸಲಾಗುತ್ತದೆ.<br><br>2ನೇ ಹಂತದಲ್ಲಿ, ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ವಿಧೇಯಕ 2013ರ ಖಂಡ 4 'ಸಿ' ರಡಿಯಲ್ಲಿನ ತಾಂತ್ರಿಕ ಸಮಿತಿಯ ವರದಿ ಮತ್ತು ಖಂಡ 4 'ಡಿ' ಯಲ್ಲಿ ಪರಿಗಣಿಸಿದಂತೆ, ಕಬ್ಬಿನಿಂದ ವಾಸ್ತವವಾಗಿ ಪ್ರಾಪ್ತವಾದ ಆದಾಯ, ಸಕ್ಕರೆ ಉತ್ಪಾದನೆ, ಅದರ ಉಪ-ಉತ್ಪತ್ತಿ ಅಂಶಗಳನ್ವಯ, ವಾಸ್ತವವಾಗಿ ಆದಾಯ ಹಂಚಿಕೆ ಸೂತ್ರದ ಆಧರಿಸಿ, ಎಫ್.ಆರ್.ಪಿ ಬೆಲೆಗಿಂತ ಮೇಲೆ ಹೆಚ್ಚುವರಿಯಾಗಿ ಕಬ್ಬು ಬೆಲೆಯನ್ನು ಸಂಬಂಧಿಸಿದ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾಗಿರುತ್ತದೆ.<br>ಕೇಂದ್ರ ಸರ್ಕಾರವು ಕಬ್ಬಿಗೆ ನಿಗದಿಪಡಿಸುವ ನ್ಯಾಯ ಮತ್ತು ಲಾಭದಾಯಕ ಬೆಲೆಯ ಮಾನದಂಡಗಳು ದೇಶಾದ್ಯಂತ ಏಕರೂಪವಾಗಿ ಅನ್ವಯವಾಗುತ್ತವೆ ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡುವ ರೈತರಿಗೆ ರಾಜ್ಯ ಸರ್ಕಾರದಿಂದ ಬೆಂಬಲ ಬೆಲೆ ನಿಗಧಿಪಡಿಸಲು ನಿಯಮಗಳಲ್ಲಿ ಅವಕಾಶಗಳು ಇರುವುದಿಲ್ಲ. |

ಸಿಐ 278 ಎಸ್‌ಜಿಎಫ್ 2023

(ಶಿವಾನಂದ ಎಸ್.ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು